**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು-ಮಡಿಕೇರಿ**

**<u>ಎಸ್.ಸಿ ಸಂಖ್ಯೆಃ 78/2023</u>**

ಪ್ರಾಸಾಃ 4
ಚಾಸಾಃ**2**

ಸಾಕ್ಷಿದಾರರ ಹೆಸರು : ಮಂಜುನಾಥ

ತಂದೆಯ ಹೆಸರು : ದೊಡ್ಡಚಾರ್

ವಯಸ್ಸು : 73 ವರ್ಷ

ವೃತ್ತಿ : ಕೂಲಿ ಕೆಲಸ

ವಾಸ : ನಾಕಲಗೂಡು.

**ಸಾಕ್ಷಿಯನ್ನು ದಿನಾಂಕ 08-04-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ಆರೋಪಿಗಳ ಪರಿಚಯ ಇದೆ. ಚಾಸಾ-1 ನನ್ನ ಹೆಂಡತಿ ಆಕೆ ಮೃತಪಟ್ಟಿದ್ದಾಳೆ. ಚಾಸಾ-3 ನನ್ನ ಮಗ. ಪ್ರಾಸಾ-1 ಹಾಗೂ ಚಾಸಾ-5 ರವರ ಪರಿಚಯ ಇದೆ.

2. ನಾಕಲಗೂಡು ಗ್ರಾಮದ ಸರ್ವೆ ನಂಬರ್ 38/1 ರಲ್ಲಿ 15 ಸೆಂಟ್ಸ್ ಜಾಗಕ್ಕೆ ನಾನು ಬೇಲಿ ಹಾಕಿಕೊಂಡಿದ್ದೇನೆ. ಸದರಿ ಜಾಗವನ್ನು ತಮ್ಮ ಹೆಸರಿಗೆ ಮಾಡಿಕೊಳ್ಳಲು ಚಾಸಾ-3 ಅರ್ಜಿ ಹಾಕಿದ್ದರು. ಸದರಿ ಜಾಗದಲ್ಲಿ ನಾನು ಒಂದು ಶೀಟಿನ ಮನೆಯನ್ನು ನಿರ್ಮಿಸಿದ್ದೆ ಅಲ್ಲಿ ನಾನೇ ವಾಸಮಾಡಿಕೊಂಡಿದ್ದೆ. ಚಾಸಾ-3 ಮನೆ ಕಟ್ಟಲು ಹಣಕಾಸು ನೀಡಿದ್ದರು.

3. ಸುಮಾರು ಮೂರು ವರ್ಷದ ಮೊದಲು ಚಾಸಾ-1 ರವರಿಗೆ ಆರೋಗ್ಯ ಚೆನ್ನಾಗಿ ಇಲ್ಲದ ಕಾರಣ ನಾನು ಹಾಗೂ ನನ್ನ ಹೆಂಡತಿ ಶನಿವಾರಸಂತೆಯ

ಹೋಟೆಲ್ ಗೆ ಹೋದೆವು. ಬೆಳಿಗ್ಗೆ 7.30 ಗಂಟೆಗೆ ನಾವು ವಾಪಸ್ಸಾದಾಗ ಆರೋಪಿಗಳು ಮನೆಯ ಒಳಗಡೆ ಇದ್ದು, ಬೆಂಕಿ ಉರಿಸಿ ಅಡುಗೆ ಮಾಡುತಿದ್ದರು. ಆರೋಪಿಗಳನ್ನು ವಿಚಾರಿಸಿದಾಗ ಆರೋಪಿಗಳು ಅದು ಅವರ ಮನೆ ಎಂದು ಹೇಳಿ ಜೋರು ಮಾಡಿದ್ದರು. ಆರೋಪಿ ಬಸವರಾಜು, ಶಶಾಂಕ್ ಬಂದು ಸದರಿ ಮನೆ ಆರೋಪಿಗಳದ್ದು ಎಂದು ನಮಗೆ ಜೋರು ಮಾಡಿದ್ದರು. ಆರೋಪಿ ಲಕ್ಷ್ಮಿ ದೊಣ್ಣೆಯಿಂದ ಚಾಸಾ-1 ರವರಿಗೆ ಹಲ್ಲೆ ಮಾಡಿ, ಕುತ್ತಿಗೆಯನ್ನು ಹಿಸುಕಿದ್ದರು. ಉಳಿದ ಆರೋಪಿಗಳು ವೇದಾವತಿಯರ ಕುತ್ತಿಗೆ ಹಿಸುಕಿ ಗಾಯ ಮಾಡಿದ್ದರು. ಆ ಬಳಿಕ ಆರೋಪಿ ಸಣ್ಣಪ್ಪ ನನ್ನ ಕಿಸೆಯಲ್ಲಿ ಇದ್ದ 25,000/- ರೂಪಾಯಿ ಹಣವನ್ನು ಕಿತ್ತುಕೊಂಡು ಹೋದ. ಆರೋಪಿಗಳು ನಾನು ಜೋರು ಮಾಡಿದರೆ ಕೊಲೆ ಮಾಡುತ್ತೇನೆ ಎಂದು ಹೆದರಿಸಿದ್ದರು.

4. ಆ ಬಳಿಕ ಅಲ್ಲಿಗೆ ಪ್ರಾಸಾ-1 ಹಾಗೂ ಚಾಸಾ-5 ಬಂದು ಜಗಳ ಬಿಡಿಸಿ ಸಮಾಧಾನ ಮಾಡಿದ್ದರು. ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆ ಬಳಿಕ ಚಾಸಾ-1 ಶನಿವಾರಸಂತೆ ಠಾಣೆಗೆ ಹೋಗಿ ದೂರು ನೀಡಿದ್ದರು. ಕಂದಾಯ ಇಲಾಖೆಯವರು ಅಲ್ಲಿಗೆ ಬಂದು ಮನೆಗೆ ಬೀಗ ಹಾಕಿದರು. ಪೊಲೀಸರು ಬಂದು ಸ್ಥಳವನ್ನು ನೋಡಿ 1ನೇ ಆರೋಪಿಯನ್ನು ಅಲ್ಲಿಗೆ ಕರೆದುಕೊಂಡು ಬಂದು 1ನೇ ಆರೋಪಿ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೊಲೀಸರು ಮಹಜರ್ ತಯಾರಿಸಿದ್ದರು. ದೊಣ್ಣೆ ಹಾಗೂ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದೊಣ್ಣೆ ನನ್ನ ಸಮಕ್ಷಮದಲ್ಲಿ ಪೊಲೀಸರು ಅಮಾನತ್ತುಪಡಿಸಿಕೊಂಡ ದೊಣ್ಣೆಯಾಗಿದ್ದು, ಅದನ್ನು ಮು.ಮಾ-1 ಎಂದು ಈಗಾಗಲೇ ಗುರುತಿಸಲಾಗಿದೆ. ಆರೋಪಿ ಸಣ್ಣಪ್ಪ ರವರಿಂದ ಅಮಾನತ್ತುಪಡಿಸಿಕೊಂಡ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-2 ಎಂದು ಗುರುತಿಸಲಾಯಿತು.

5. ಆರೋಪಿಗಳು ನ್ಯಾಯಾಲಯದಲ್ಲಿ ಉಪಸ್ಥಿತರು ಇದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ. 1, 5, 6 ಮತ್ತು 7 ನೇ ಆರೋಪಿ ಗಳು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿಗಳ ಪರ ವಕೀಲರು ಆರೋಪಿಗಳನ್ನು ಗುರುತಿಸಲು ತಕರಾರು ಇಲ್ಲ ಎಂದು ಹೇಳಿದ ಮೇರೆಗೆ ಗುರುತಿಸಲಾಗಿದೆ ಎಂದು ತೆಗೆದುಕೊಳ್ಳಲಾಯಿತು. ನಿಪಿ-2 ಹಾಗೂ ನಿಪಿ-4 ರಲ್ಲಿ ಇರುವ ಚಾಸಾ-1 ರವರ ಹೆಬ್ಬೆಟ್ಟನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿ ಇರುವ ಹೆಬ್ಬೆಟ್ಟು ಚಾಸಾ-1 ರವರಿಗೆ ಸೇರಿದ್ದು. ಆರೋಪಿಗಳು ನಮ್ಮ ಮನೆಗೆ ಪ್ರವೇಶ ಮಾಡಿ, ಅದನ್ನು ವಿಚಾರಿಸಿದಾಗ ನಮಗೆ ಹಲ್ಲೆ ಮಾಡಿ, ಕುತ್ತಿಗೆ ಹಿಸುಕಿದ್ದಾರೆ ಎಂದು ಸದರಿ ಪುಕಾರಿನಲ್ಲಿ ಬರೆಯಲಾಗಿದೆ.

**<u>ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ ಸಿ.ಎಸ್.ಪಿ. ವಕೀಲರಿಂದಃ</u>**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು .

**<u>ಪಾಟೀಸವಾಲು- 5 ನೇ ಆರೋಪಿತರ ಪರವಾಗಿ ಶ್ರೀ ಪಿ.ಕೆ.ಎಂ. ವಕೀಲರಿಂದಃ</u>**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು

**<u>ಪಾಟೀಸವಾಲು- 6 ಮತ್ತು 7 ನೇ ಆರೋಪಿತರ ಪರವಾಗಿ ಶ್ರೀ ಡಿ.ಡಿ.ಸಿ ವಕೀಲರಿಂದಃ</u>**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ